**ಓ.ಎಸ್. ನಂ. 93/2023 ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 14.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 8 ರಿಂದ 12 ನೇ ಪ್ರತಿವಾದಿ ಪರ ಶ್ರೀ ಎಸ್.ಪಿ.ಆರ್ ವಕೀಲರಿಂದಃ</u>**

ನನಗೆ ಈ ದಾವೆಯ ಬಗ್ಗೆ ಸಂಪೂರ್ಣವಾಗಿ ತಿಳಿದಿರುತ್ತದೆ. ಸೈಯದ್ ಸಾಬುಲಾಲ್ ನನ್ನ ತಾತನಾಗಿರುತ್ತಾರೆ. ಅವರು ನನ್ನ ತಾತ ಎಂದು ತೋರಿಸುವ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ ಸೈಯದ್ ಸಾಬುಲಾಲ್ ರವರಿಗೆ ಆಸ್ತಿಯು ಅವರ ತಂದೆಯಿಂದ ಬಂದಿರುತ್ತದೆ. ಅವರ ತಂದೆಯ ಹೆಸರು ಮಹಮದ್ ಸಾಬ್ ಮತ್ತು ತಾಯಿಯ ಹೆಸರು ಹಯತ್ ಬೀ ಆಗಿರುತ್ತದೆ. ಅವರಿಗೆ ದಾವಆಸ್ತಿಯು ಹೇಗೆ ಬಂದಿರುತ್ತದೆ ಎಂದು ಮಾಹಿತಿ ಇರುವುದಿಲ್ಲ. ಈ ದಾವೆಯಲ್ಲಿರುವ ಉಳಿದ ವಾದಿಯರು ನನ್ನ ಚಿಕ್ಕಪ್ಪ, ಅತ್ತೆ, ಸಹೋದರ, ಸಹೋದರಿಯಾಗಿರುತ್ತಾರೆ. ವಾದಿಗಳೆಲ್ಲರೂ ಸಾಬುಲಾಲ್ ರವರ ವಂಶಸ್ಥರಾಗಿರುತ್ತಾರೆ. ನಾವೆಲ್ಲರೂ ಒಂದೇ ಕುಟುಂಬಕ್ಕೆ ಸೇರಿರುತ್ತೇವೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸೈಯದ್ ಸಾಬುಲಾಲ್ ರವರು ತೀರಿಕೊಂಡಿರುವ ದಿನಾಂಕ ನೆನಪಿರುವುದಿಲ್ಲ. ಅವರ ಮರಣ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ದಾವಆಸ್ತಿಗೆ ಸಂಬಂಧಿಸಿದಂತೆ 1974 ರಿಂದ ಪಹಣಿಯನ್ನು ಪಡೆದುಕೊಂಡಿದ್ದು, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಆಸ್ತಿಯ ಇ.ಸಿ ಯಲ್ಲಿ ಕ್ರಯಪತ್ರದ ಬಗ್ಗೆ ನಮೂದಾಗಿರುವುದನ್ನು ನಾನು ನೋಡಿರುವುದಿಲ್ಲ. ನಾನು ಹೆಚ್.ಡಿ.ಕೋಟೆಯ ಮುಸ್ಲಿಂ ಬ್ಲಾಕಿನಲ್ಲಿ ವಾಸವಾಗಿದ್ದು, ಉಳಿದ ವಾದಿಗಳು ಮೈಸೂರಿನಲ್ಲಿ ವಾಸವಾಗಿರುತ್ತಾರೆ. ದಾವ ಮನೆಯಲ್ಲಿ 8 ನೇ ವಾದಿಯು ವಾಸವಾಗಿರುತ್ತಾರೆ. 8 ನೇ ವಾದಿಯು ದಾವಆಸ್ತಿಯ ಪಕ್ಕದಲ್ಲಿರುವ ಮನೆಯಲ್ಲಿ ವಾಸವಾಗಿರುತ್ತಾರೆ. ದಾವ ಆಸ್ತಿ 2-38 ಎಕರೆಯಲ್ಲಿ 15-20 ಮನಗಳು ಇದ್ದು, ಉಳಿದ ಜಾಗ ಖಾಲಿ ಇರುತ್ತದೆ. ಸದರಿ ಮನೆಗಳು 20-25 ವರ್ಷದ ಹಳೆಯ ಮನೆಗಳಾಗಿರುತ್ತವೆ. ಸದರಿ ಮನೆಗಳಲ್ಲಿ ಯಾರು ವಾಸವಾಗಿರುತ್ತಾರೆ ಎಂಬ ಮಾಹಿತಿ ಇರುತ್ತದೆ. ಅವರ ಹೆಸರು ಸರ್ದಾರ್ ಖಾನ್, ಫೈರೋಜ್ ಖಾನ್, ಜಾಹಿರ ಖಾನಂ, ಅಕ್ಬರ್ ಖಾನ್, ಅಮ್ರಿನ್ ಅಲಂ, ಅಪ್ಸರ್, ಎ.ಸಿ.ನಾಗರಾಜು, ತಮ್ಮಣ್ಣೇಗೌಡ, ಲಿಂಗೇಗೌಡ, ವೀರಭದ್ರೇಗೌಡ, ಇಂದಿರಾ, ಪಿ.ಜಹೀರ್, ಸರ್ದಾರ್ ಖಾನ್ ಆಗಿರುತ್ತದೆ. ದಾವಆಸ್ತಿಯಲ್ಲಿ ಯಾವುದೇ ಅಂಗಡಿ ಮಳಿಗೆ ಇರುವುದಿಲ್ಲ. ಉಳಿದ ಖಾಲಿ ಜಾಗದಲ್ಲಿ ನಾವು 4 ವರ್ಷದ ಹಿಂದೆ ವ್ಯವಸಾಯ ಮಾಡುತ್ತಿದ್ದು ಈಗ ಮಾಡುತ್ತಿಲ್ಲ. ಹಿಂದೆ ಸದರಿ ಜಮೀನಿನಲ್ಲಿ ರಾಗಿ, ಹತ್ತಿ, ಜೋಳ ಬೆಳೆಯನ್ನು ಬೆಳೆದಿದ್ದೆವು. ಪಹಣಿಯಲ್ಲಿ ನಾವು ಬೆಳೆ ಬೆಳೆದಿರುವ ಬಗ್ಗೆ ನಮೂದು ಇರುತ್ತದೆ. ದಾವಆಸ್ತಿಯ ಪೂರ್ವಕ್ಕೆ ಕೆರೆ ಕೋಡಿ ಇರುತ್ತದೆ. ಕೆರೆ ಕೋಡಿಗೆ ತಾಗಿಕೊಂಡಂತೆ ದಾವಆಸ್ತಿಯಲ್ಲಿ ಸ್ವಲ್ಪ

ಭಾಗ ಖಾಲಿ ಇರುತ್ತದೆ. ನಾನು ದಾವಪತ್ರದಲ್ಲಿ ಹೇಳಿದಂತೆ ಠಾಣೆಗೆ ಹೋಗಿ ದೂರು ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿವುದಿಲ್ಲ. ಮೇಲೆ ಹೇಳಿದ ವ್ಯಕ್ತಿಗಳ ಹೆಸರಿನಲ್ಲಿ 3 ನೇ ವ್ಯಕ್ತಿಯ ಹೆಸರಿನಿಂದ ಖಾತೆ ವರ್ಗಾವಣೆಯಾಗಿರುತ್ತದೆ. ಸದರಿ 3 ನೇ ವ್ಯಕ್ತಿ ಯಾರೆಂದು ನನಗೆ ಗೊತ್ತಿರುವುದಿಲ್ಲ. ಯಾವ ರೀತಿ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ಕ್ರಯಪತ್ರದ ಮೂಲಕ ಮಾಡಿಕೊಂಡಿದ್ದು, 1986–87 ರಲ್ಲಿ ತಹಶೀಲ್ದಾರ್ ರವರು ಖಾತೆಯನ್ನು ವಜಾ ಮಾಡಿರುತ್ತಾರೆ ಎನ್ನುವರು. ಆ ರೀತಿ ಖಾತೆ ವಜಾ ಮಾಡಲು ನನ್ನ ತಾತ ಅರ್ಜಿ ನೀಡಿದ್ದರು. ಕ್ರಯಪತ್ರದಲ್ಲಿ ಮಾರಾಟ ಮಾಡಿದವರ ಹೆಸರನ್ನು ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ವಾದಿಯರಿಗೂ ಸಾಬುಲಾಲ್ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ, ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಯು ಮೂಲತಃ ಹಯತ್‌ಶಬಿ ಅಲಿಯಾಸ್ ಇಮಾಮ್ ಸಾಬ್ ರವರಿಗೆ ಸಾಗುವಳಿ ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಅವರು ತೀರಿಕೊಂಡ ನಂತರ ಅವರ ಮಕ್ಕಳಿಗೆ ದಾವಆಸ್ತಿಯು ಹೋಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 11.3.1970 ರಂದು ದಾವಆಸ್ತಿಯು ಸರ್ಫನ್ ಬೀ ಕೊಂ ಅಬ್ದುಲಿ ಸತ್ತರ್ ರವರಿಗೆ ನೋಂದಣಿ ಕ್ರಯಪತ್ರದ ಮೂಲಕ ಹೋಗಿರುತ್ತದೆ ಎಂದರೆ ಸಾಕ್ಷಿದಾರರು ನಕಲಿ ಕ್ರಯಪತ್ರ ಮಾಡಿಸಿಕೊಂಡಿರುತ್ತಾರೆ ಎನ್ನುವರು. ನಂತರ ಅವರು ಯೂಸುಪ್ ಕಾಕಾ ರವರಿಗೆ ದಿನಾಂಕ 21.7.1975 ರ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನಕಲಿ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎನ್ನುವರು. ನಂತರ ಸದರಿ ಯೂಸುಪ್ ಕಾಕ ರವರು ದಾವಆಸ್ತಿಯನ್ನು ಕೆ.ಎಂ.ಅಬ್ದುಲ್ಲ ಮತ್ತು ಕೆ.ಕೆ.ಅಬ್ದುಲ್ ರಜಾಕ್ ರವರಿಗೆ ದಿನಾಂಕ 29.91984 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನಕಲಿ ಖಾತೆ ಮಾಡಿದ್ದು ವಜಾ ಆಗಿರುತ್ತದೆ ಎನ್ನುವರು. ನಂತರ ಅವರು ಸದರಿ ಆಸ್ತಿಯನ್ನು 8 ನೇ ಪ್ರತಿವಾದಿಯ ಗಂಡನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮವಾಗಿ ಮಾರಾಟ ಮಾಡಿರುತ್ತಾರೆ ಎನ್ನುವರು. ಸದರಿ ತಮ್ಮೇಗೌಡ ತೀರಿಕೊಂಡ ನಂತರ 8 ರಿಂದ 12 ನೇ ಪ್ರತಿವಾದಿಯರು ದಾವಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮವಾಗಿ ಸ್ವಾಧೀನದಲ್ಲಿರುತ್ತಾರೆ ಎನ್ನುವರು. ತಮ್ಮೇಗೌಡರು ಖರೀದಿ ಮಾಡಿದ ದಿನದಿಂದಲೂ 8 ರಿಂದ 12 ನೇ ಪ್ರತಿವಾದಿಯರು ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮವಾಗಿ ವಾಸವಾಗಿರುತ್ತಾರೆ ಎನ್ನುವರು. 1992 ರಿಂದ ನಾನು ಆಸ್ತಿಗೆ ಹೋಗಿ ಆಸ್ತಿ ನಮ್ಮದೆಂದು ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ಹೋಗಿ ಕೇಳಿರುತ್ತೇನೆ ಎನ್ನುವರು. 8 ರಿಂದ 12 ನೇ ಪ್ರತಿವಾದಿಯರು ಆಸ್ತಿಯ ಪೋಡಿಗೆ ಅರ್ಜಿ ನೀಡಿದಾಗ ನಾನು ಅವರ ಬಳಿ ಕೇಳಿದ್ದು, ಯಾವ ವರ್ಷ ಎಂದು ನೆನಪಿರುವುದಿಲ್ಲ. ನನಗೆ ಕೂಡಲೆ ದಾವೆ ಹಾಕಲು ತೊಂದರೆ ಇರಲಿಲ್ಲ. ದಾವಆಸ್ತಿಯ ಮಧ್ಯದಲ್ಲಿ ರಸ್ತೆಯು ಹಾದು ಹೋಗಿರುತ್ತದೆ. ರಸ್ತೆ

ಮಂಜೂರಾದಾಗ 8 ರಿಂದ 12 ನೇ ಪ್ರತಿವಾದಿಯರು ದುರಸ್ತಿ ಪೋಡಿಗೆ ಅರ್ಜಿ ಹಾಕಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ತಹಶೀಲ್ದಾರ್ ರವರು ಬಂದು ರದ್ದು ಮಾಡಿರುತ್ತಾರೆ ಎನ್ನುವರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ದುರಸ್ತಿ ಪೋಡಿ ಆದೇಶದ ನಂತರ ದಾವಆಸ್ತಿಯ ಪಹಣಿಯಲ್ಲಿ ನನ್ನ ತಾತ ಮತ್ತು ಇತರರ ಹೆಸರು ಬರುತ್ತಿದೆ. ಪಹಣಿಯಲ್ಲಿ ತಪ್ಪಾಗಿ ನಮೂದಾಗಿರುವುದನ್ನು ದುರುಪಯೋಗಪಡಿಸಿಕೊಂಡು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಹೇಳಿರುವ ಮೂಲ ವ್ಯಕ್ತಿಗೂ ದಾವಆಸ್ತಿಗೂ ಸಂಬಂಧ ಇರುವುದಿಲ್ಲ, ಪಹಣಿಯಲ್ಲಿ ತಪ್ಪಾಗಿರುವ ಹೆಸರನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.